ಕಾಫಿ ಲೋಟವನ್ನು ಕೈಯಲ್ಲೇ ಹಿಡಿದುಕೊಂಡು, “ಬಂದೇ...” ಎನ್ನುತ್ತಾ ಬಾಗಿಲು ತೆಗೆದ ಗುರುರಾಜನಿಗೆ ಕಾಫಿ ಹೆಚ್ಚು ಬಿಸಿಯೆನಿಸಿತು. ಎದುರಿಗಿದ್ದ ಗೋವಿಂದ ಹಲ್ಲು ಕಿರಿದ. ತಿಂಡಿಗೆಂದು ಕರೆದರೆ ಆರು ಗಂಟೆಗೇ ಬಂದು ನಿಂತವನು, “ರಾತ್ರಿ ನಿದ್ದೆ ಬರಲಿಲ್ಲ, ಹಂಗಾಗಿ ಬೇಗ ಎದ್ದು ಕಾಫಿ ಕುಡ್ಯಕ್ಕೆ ಬಂದೆ” ಎಂದ. ಮುಖ ಕಿವುಚಿಕೊಂಡ ಗುರುರಾಜ ಒಳಗೆ ಬಂದು, “ಅವನಿಗೊಂದು ಲೋಟ ಕಾಫೀ” ಎಂದು ಪಿಸುಗುಟ್ಟಿದ. “ಬೆರಳು ಕೊಟ್ರೆ ಹಸ್ತ ನುಂಗೋ ಜಾತಿ, ಬೇಕಾದ್ರೆ ನಿಮ್ಮಣ್ಣಂಗೆ ನೀವೇ ಕೊಡಿ” ಅಂತ ಗೊಣಗಿದ ಮಾಲತಿ ಲೋಟ ಕುಕ್ಕಿದಳು. ಕಾಫಿ ಕುಡಿದ ಗೋವಿಂದ ಪಂಚೆಯ ತುದಿಯಿಂದ ತುಟಿ ಒರೆಸಿಕೊಂಡು, ತಿಂಡಿಗೆ ಬರುವುದಾಗಿ ಹೇಳಿ ಹೊರಟ.

ಹೀಗೆ ಆರಂಭವಾದ ಗೋವಿಂದನ ಭೇಟಿ ಅನಿಯಮಿತವಾಗಿ ಮುಂದುವರೆಯಿತು. ಕೆಲವೊಮ್ಮೆ ಗಂಟೆಗೊಮ್ಮೆ ಬಂದು, “ಒಂಚೂರು ಕಾಫೀ ಕೊಡ್ತೀರಾ” ಎಂದು ಮಾಲತಿಯನ್ನು ಕೇಳಲಾರಂಭಿಸಿದ. ಕಾಫಿಯ ನೆಪದಲ್ಲಿ ಬರುತ್ತಿದ್ದ ಗೋವಿಂದ ಮಾಲತಿಯ ಹಿಂದೆ ಮುಂದೆ ಸುತ್ತುತ್ತಾ ಅಸಂಬದ್ಧ ವಿಚಾರವನ್ನೂ, ಅಪ್ಪಯ್ಯ, ಅಮ್ಮನ ಸುದ್ದಿಯನ್ನೂ, ದೇವಸ್ಥಾನ, ಗ್ಯಾರೇಜಿನ ಕತೆಗಳನ್ನೂ ಹೇಳುತ್ತಾ ಅವಳಿಗೆ ತಲೆನೋವು ಬರಿಸುತ್ತಿದ್ದ. ಒಂದಷ್ಟು ಸಮಯ ನೋಡಿದ ಮಾಲತಿ ಬೆಳಗ್ಗೆಯೇ ದೊಡ್ಡ ಪಾತ್ರೆಯಲ್ಲಿ ಕಾಫಿ ಮಾಡಿ ಫ್ಲಾಸ್ಕಿಗೆ ಹಾಕಿ ಕೊಟ್ಟು ಕಳುಹಿಸಲು ಆರಂಭಿಸಿದಳು. ಅಷ್ಟಾದ ಮೇಲೂ ಗೋವಿಂದ ಬೇರೆ ಬೇರೆ ನೆಪ ಹೇಳಿಕೊಂಡು ಬರಲಾರಂಭಿಸಿದ. ಒಮ್ಮೊಮ್ಮೆ ರಾತ್ರಿ ತಡವಾಯಿತೆಂದು ಅಲ್ಲೇ ಉಳಿಯುತ್ತಿದ್ದ. ಅದೊಂದು ದಿನ ಮಾಲತಿಯ ಬಳಿ, “ಅವತ್ತು ನಿಮ್ಮನ್ನ ಮದುವೆಯಾಗೋಕೆ ಅಂತ ಬಂದಿದ್ದು ನಾನು, ನೀವ್ಯಾಕೆ ಗುರುರಾಜನನ್ನ ಒಪ್ಕೊಂಡ್ರಿ?” ಎಂದು ಹಲ್ಲು ಕಿರಿದ. ಇವನ ಪ್ರಶ್ನೆಯಿಂದ ಇರಿಸುಮುರಿಸುಗೊಂಡ ಮಾಲತಿ ಅವನೆದುರಲ್ಲೇ ಒಂದಷ್ಟು ಕೂಗಿ, ಸಂಜೆ ಗಂಡ ಬಂದ ಕೂಡಲೇ ಇನ್ನು ಆತನನ್ನು ಸಹಿಸಿಕೊಳ್ಳುವುದು ತನಗೆ ಸಾಧ್ಯವಿಲ್ಲವೆಂದೂ ಬೇಕಿದ್ದರೆ ಗೋವಿಂದನ ಮನೆಗೇ ತಿಂಡಿ ತಲುಪಿಸುವ ವ್ಯವಸ್ಥೆ ಮಾಡಿದರಾಯಿತು ಎಂದೂ ಗೋಗರೆದಳು. ಇಕ್ಕಳದಲ್ಲಿ ಸಿಲುಕಿದಂತಾದ ಗುರುರಾಜ ಹೆಂಡತಿಯನ್ನು ಸಮಾಧಾನಿಸಿ, ಗೋವಿಂದನ ಬಳಿ ಬಂದು ಕೈಗೆ ಒಂದೆರಡು ಸಾವಿರವಿಟ್ಟು, “ಕೂತಲ್ಲೇ ಕೂತು ನಿಂಗೂ ಬೇಜಾರಾಗಿರುತ್ತೆ ಸ್ವಲ್ಪ ದಿನಗಳ ಮಟ್ಟಿಗೆ ನೆಂಟರ ಮನೆಗೆ ಹೋಗಿ ಬಾ” ಎಂದು ಹಳೆಯ ಸಂಬಂಧಿಕರ ಅಡ್ರೆಸ್ ಎಲ್ಲವನ್ನೂ ಬರೆದುಕೊಟ್ಟು ಬಸ್ ಹತ್ತಿಸಿ ಸಾಗಹಾಕಿದ.

ಹಾಗೆ ಹೊರಟ ಗೋವಿಂದ ಊರೂರು ಅಲೆದು ಕೊನೆಗೆ ಬಂದು ತಲುಪಿದ್ದೇ ಕಾಡುಕೊಪ್ಪಲಿನ ಶ್ಯಾಮರಾಯರ ಮನೆಗೆ. ಒಂದು ಕೈಯಲ್ಲಿ ಏರ್ ಬ್ಯಾಗು, ಇನ್ನೊಂದು ಕೈಯಲ್ಲಿ ನೀರಿನ ಬಾಟಲ್ಲು ಹಿಡಿದುಕೊಂಡು ಬಂದ ಗೋವಿಂದನನ್ನು ಕಂಡ ಶ್ಯಾಮರಾಯರ ಮನೆ ಕರಿನಾಯಿ ಕಳ್ಳರನ್ನು ನೋಡಿದ್ದಕ್ಕಿಂದ ಬಿಗುವಾಗಿ ಕೂಗಿತು. ಒಳಗಿನಿಂದ ಓಡಿಬಂದ ಶ್ಯಾಮರಾಯರು ಕಾಂಪೌಡಿನ ತುದಿಗೆ ಬೆಚ್ಚಪ್ಪನ ರೀತಿ ನಿಂತಿದ್ದ ಗೋವಿಂದನನ್ನು ನೋಡಿ, “ನಿಂದೆಂಥಾ ಅವಸ್ಥೆ ಮಾರಾಯ” ಅಂತ ತಲೆ ಚಚ್ಚಿಕೊಂಡು ನಾಯಿಗೆ ಹಚಾ ಎಂದು ಅವನನ್ನು ಒಳಗೆ ಕರೆದರು. ಸಂಬಂಧದಲ್ಲಿ ಗೋವಿಂದ ಶ್ಯಾಮರಾಯರ ಅತ್ತೆ ಮಗ. ಹೆಚ್ಚು ಬಳಕೆಯಿಲ್ಲದ ಕಾರಣ ಅಪರೂಪಕ್ಕೆ ಗೋವಿಂದ ಬಂದರೂ ಶ್ಯಾಮರಾಯರಿಗೆ ನೆಂಟರು ಬಂದಾಗ ಆಗುವ ಸಹಜ ಖುಷಿಯೇನೂ ಆಗಲಿಲ್ಲ. “ಶಾರದಾ... ವೆಂಕಟ ಮಾವನ ಮಗ ಗೋವಿಂದ ಬಂದಿದಾನೆ, ಬಾಯಾರಿಕೆಗೆ ಏನಾದ್ರೂ ಮಾಡ್ಕೊಂಬಾ” ಎಂದು ಹೆಂಡತಿಯನ್ನು ಕೂಗಿ ತೋಟದ ಕೆಲಸಕ್ಕೆಂದು ಹೊರ ನಡೆದರು. ಗೋವಿಂದನ ಗುಣದ ಬಗ್ಗೆ ಸಂಬಂಧಿಕರ ವಲಯದಿಂದ ಕೇಳಿ ತಿಳಿದುಕೊಂಡಿದ್ದ ಶಾರದಕ್ಕ ಅವನ ದೊಡ್ಡ ಬ್ಯಾಗನ್ನು ನೋಡಿ ಕಂಗಾಲಾದಳು.

ಒಂದೆರೆಡು ದಿನಗಳ ಕಾಲ ಹೆಚ್ಚೇನೂ ಮಾತನಾಡದೆ ಅತ್ತಿತ್ತ ಅಲೆದಾಡುತ್ತಾ, ಹಲ್ಲು